

ಒಬ್ಬ ಕಣ್ಣು ಕಾಣದ ವ್ಯಕ್ತಿ ತಲೆಯ ಮೇಲೆ ಎಣ್ಣೆಯ ಡಬ್ಬವನ್ನು ಹೊತ್ತುಕೊಂಡು, ಕೈಯಲ್ಲಿ ಲಾಂಟನ್ ದೀಪ ಹಿಡಿದುಕೊಂಡು ಒಂದು ರಾತ್ರಿ ದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ.
ಅವರನ್ನು ನೋಡಿದ ಒಬ್ಬ ವ್ಯಕ್ತಿ ಆಶ್ಚರ್ಯದಿಂದ ಕೇಳಿದನು:
"ಅಲ್ಲ ಮಾರಾಯ, ನಿಮಗೆ ಕಣ್ಣು ಕಾಣುವುದಿಲ್ಲವಲ್ಲಾ! ನಿಮಗೆ ರಾತ್ರಿ ಆಗಲಿ ಹಗಲು ಆಗಲಿ ಏನು ವ್ಯತ್ಯಾಸ? ಹಾಗಿದ್ದರೂ ಈ ಲಾಂಟನ್ ಯಾರಿಗಾಗಿ?"
ಅದಕ್ಕೆ ಆ ಕುರುಡನು ಶಾಂತವಾಗಿ ಉತ್ತರಿಸಿದ:
"ಈ ಲಾಂಟನ್ ನನಗಾಗಿ ಅಲ್ಲ ಮಾರಾಯ, ನಿನಗಾಗಿ. ಬೆಳಕಿಲ್ಲದೆ ಕತ್ತಲಿನಲ್ಲಿ ನಡೆಯುವಾಗ ನೀನು ಕೂಡ ಕುರುಡನೇ ಆಗುತ್ತೀಯ. ಈ ಕತ್ತಲಿನಲ್ಲಿ ನೀನು ನನಗೆ ತಾಗಿದರೆ, ನನ್ನ ತಲೆಯ ಮೇಲಿರುವ ಎಣ್ಣೆಯ ಡಬ್ಬ ಕೆಳಗೆ ಬಿದ್ದು ನನಗೆ ನಷ್ಟವಾಗುವುದಿಲ್ಲವಾ?"
ನಿಜವಾಗಿ ನೋಡಿದರೆ, ಯಾವ ವಸ್ತುವಾದರೂ ಅದರ ಮೇಲೆ ಬೆಳಕು ಬಿದ್ದು, ಅದು ಪ್ರತಿಫಲಿಸಿ ನಮ್ಮ ಕಣ್ಣಿಗೆ ತಲುಪಿದಾಗ ಮಾತ್ರ ನಮಗೆ ಕಾಣುತ್ತದೆ.
ಆಕಾಶದಲ್ಲಿ ಅನೇಕ ಕಪ್ಪು ಗುರಿಗಳು (ಕೃಷ್ಣ ರಂಧ್ರಗಳು – Black Holes) ಇವೆ ಎನ್ನುತ್ತಾರೆ. ಅವು ಬೆಳಕನ್ನೇ ಒಳಗೆಳೆದುಕೊಳ್ಳುವುದರಿಂದ ನಮಗೆ ಅಥವಾ ಟೆಲಿಸ್ಕೋಪ್‌ಗಳಿಗೆ ಕಾಣುವುದಿಲ್ಲ.

ನೀತಿ:
ನಮ್ಮ ಕೆಲಸಗಳು ಯಾವಾಗಲೂ ನಮಗಷ್ಟೇ ಉಪಯೋಗವಾಗಬೇಕೆಂದಿಲ್ಲ. ಕೆಲವೊಮ್ಮೆ ನಾವು ಮಾಡುವ ಒಳ್ಳೆಯ ಕೆಲಸಗಳು ಇತರರಿಗೆ ದಾರಿದೀಪವಾಗುತ್ತವೆ.
ಹಾಗೆಯೇ, ಬೆಳಕು ಇಲ್ಲದೆ ಎಲ್ಲರೂ ಕುರುಡರೇ , ಜ್ಞಾನ ಮತ್ತು ಅರಿವು ನಮ್ಮ ಜೀವನದ ನಿಜವಾದ ಬೆಳಕು.